ಉ) ಭೂ ನ್ಯಾಯ ಮಂಡಲದ ನ್ಯಾಯ ಪೀಠದ ಎದುರಿಗೆ ಗೇಣಿದಾರ ಭೂ ಮಾಲೀಕ ಹಾಗೂ ಸಾರ್ವಜನಿಕರ ಉಪಸ್ಥಿತಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಊ) ಭೂ ನ್ಯಾಯ ಮಂಡಳದ ಕಾರ್ಯ ನಡೆದಾಗ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಿರುವುದಕ್ಕೆ ಕಾರಣ ವೇನು ?

ಋ) ಗೇಣಿದಾರರ ಪರವಾಗಿ ವಿಲೇವಾರಿ ಆಗಿರುವ ಅರ್ಜಿಗಳನ್ನು ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಹೆಸರನ್ನು ನೋಂದಾಯಿಸಿ ಒಂದೇ ಕಾಲದಲ್ಲಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ 'ಕಾಂಪೂಟರೈಜ್ಡ್' ದಾಖಲಾತಿ ಕೊಠಡಿಯನ್ನು ಸ್ಥಾಪಿಸುವುದರಲ್ಲಿ ಹಾಗೂ ವಿಶೇಷ ಜಮೀನುಗಳ ಪಾಸ್ ಬುಕ್‌ಗಳನ್ನು ಕೊಡುವುದರಲ್ಲಿ ತಡವಾಗುತ್ತಿರುವುದಕ್ಕೆ ಕಾರಣವೇನು ?

ೠ) ಭೂ ಸುಧಾರಣೆ ಕಾಯಿದೆ ಅನುಷ್ಠಾನಕ್ಕೆ ಬಂದ ಮೇಲೆ ಗೇಣಿದಾರರಿಂದ ಹಾಗೂ ಭೂ ಮಾಲೀಕರಿಂದ ಹೆಚ್ಚಿನ ಜಮೀನು ಸರ್ಕಾರಕ್ಕೆ ಬಂದಿರುವ ಬಗ್ಗೆ ವಿವರಗಳನ್ನು ಒದಗಿಸುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ)

ನಿಯಮ	ಅರ್ಜಿಗಳ ಸಂಖ್ಯೆ
೩೮	೨೩೧೬೩
೪೨	೧೦೬೨೨೦
೪೮ ಎ	೮೧೫೯೯೮
೬೬	೧೪೮೯೫೦
೭೯ ಬಿ	೧೬೦೩
ಇನಾಂಗಳು	೧೯೨೨೮೬

ಆ) ವಿಳಂಬವಿಲ್ಲ.

ಇ) ೨೯೪೧೭ ಭೂ ನ್ಯಾಯ ಮಂಡಳಿಗೆ ಪಾಪಸ್ಸು ಕಳಿಸಲಾಗಿದೆ.

ಈ) ಭೂ ನ್ಯಾಯ ಮಂಡಳಿಯು ವಿಧಿ ಬಹ್ಯವಾಗಿ ಪ್ರಕರಣಗಳನ್ನು ಆಲಿಸುತ್ತಿವೆ. ನ್ಯಾಯಾಲಯದಿಂದ ರವಾನೆಯಾಗಿರುವ ಪ್ರಕರಣಗಳ ತ್ವರಿತ ನಿರ್ಣಯಕ್ಕಾಗಿ ಜಿಲ್ಲಾ ಭೂ ಸುಧಾರಣಾ ಅಪೀಲು ಪ್ರಾಧಿಕಾರವು ಸ್ಥಾಪಿತಗೊಂಡು ಕಾರ್ಯ ನಿರ್ವಹಿಸುತ್ತಿವೆ.

ಉ) ಇಲ್ಲ.

ಊ) ಯಾವ ರೀತಿಯ ನಿರ್ಬಂಧವೂ ಇಲ್ಲ.

ಋ) ರಿಕಾರ್ಡ್ ಆಫ್ ರೈಟ್ಸ್‌ನಲ್ಲಿ ಗೇಣಿದಾರರ ಹೆಸರನ್ನು ನಮೂದಿಸಿದ ನಂತರ ಪಟ್ಟಿ ಪುಸ್ತಕವನ್ನು ನೀಡಲಾಗುತ್ತಿದೆ.

ೠ) ೨,೯೭,೬೧೭ ಎಕರೆಗಳು

೧,೦೪,೬೭೨ ಎಕರೆಗಳು ಹಂಚಲಾಗಿದೆ

೧,೮೨,೯೪೫ ಎಕರೆಗಳು ಮೊಕದ್ದಮೆ ಹಿಡಿತದಲ್ಲಿದೆ.

ಹಿಂದಳಿದ ಸಮಾಜದ ಸರ್ಕಾರಿ ಹಾಗೂ ಖಾಸಗಿ ವಿದ್ಯಾರ್ಥಿನಿಲಯಗಳ ಬಗ್ಗೆ

೧೦೩. (೧) **ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್** (ಸಂಕೇಶ್ವರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪರಿಶಿಷ್ಟ ಹಾಗೂ ಹಿಂದುಳಿದ ಸಮಾಜದ ಸರ್ಕಾರಿ ಹಾಗೂ ಖಾಸಗಿ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ?

ಆ) ಕಳೆದ ಮೂರು ವರ್ಷಗಳಲ್ಲಿ ಈ ವಿದ್ಯಾರ್ಥಿನಿಲಯಂಗಳಲ್ಲಿ ವಿದ್ಯಾಭ್ಯಾಸ ಮಾಡಿ ರಾಜ್ಯದ ಪುಟ್ಟದಲ್ಲಿ ಮೊದಲ ಮೂರನೇ ಶ್ರೇಣಿಯಲ್ಲಿ ತೇರ್ಗಡೆಯಾದಂತಹ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ದಿನ ನಿತ್ಯ ಆಹಾರಕ್ಕಾಗಿ ಪ್ರತಿವಿದ್ಯಾರ್ಥಿಗೆ ವಿಚರ್ಚು ಮಾಡುತ್ತಿರುವ ಹಣದ ಮೊತ್ತವೆಷ್ಟು ?

ಈ) ಸರ್ಕಾರಿ ಹಾಗೂ ಖಾಸಗಿ ವಿದ್ಯಾರ್ಥಿನಿಲಯಗಳ ವಿಸರ್ಜಿತ ಕಟ್ಟಡಗಳ ಸಂಖ್ಯೆ ಎಷ್ಟು ?

ಉ) ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ನಡೆಸಲು ಮನೆ ಮಾಲೀಕರಿಗೆ ಕೊಡುತ್ತಿರುವ ವರ್ಷದ ಒಟ್ಟು ಬಾಡಿಗೆ ಎಷ್ಟು ?

ಊ) ರಾಜ್ಯದಲ್ಲಿ ಪ್ರತಿ ಪ್ರೌಢಶಾಲೆ ಇರುವ ಊರುಗಳಲ್ಲಿ ಒಂದು ವಿದ್ಯಾರ್ಥಿನಿಲಯ ಕಟ್ಟಿಸಲು ಸರ್ಕಾರದವನ ನಿಲುವೇನು ?

ಶ್ರೀ ಜಿ. ಬಸವಣ್ಣಪ್ಪ, (ಸಮಾಜ ಕಲ್ಯಾಣ ಮಂತ್ರಿಗಳು).

ಆ) ೧೮೭೬.

ಆ) ಇಲ್ಲಾ.

ಇ) ೧) ರೂ. ೩೦-೩೩ ಪೈಸೆ (ಫ್ರೀ ಮೆಟ್ರಿಕ್)
೨) ರೂ. ೪-೧೬ ಪೈಸೆಯಿಂದ (ಪೋಸ್ಟ್ ಮೆಟ್ರಿಕ್)
೫೦-೦೦ ರೂ. ಗಳವರೆಗೆ.

ಈ) ವಿಸರ್ಜಿತ ಕಟ್ಟಡಗಳು ಯಾವುದೂ ಇರುವುದಿಲ್ಲ.

ಉ) ೩೬.೦೦ ಲಕ್ಷ. ರೂ.ಗಳು.

ಊ) ಪ್ರೌಢಶಾಲೆಗಳು ಇರುವ ಊರುಗಳಲ್ಲಿ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆ ದೊರಕುವ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಂಗಳನ್ನು ಕಟ್ಟಿಸಲು ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ರೆಕಾರ್ಡ್ ಆಫ್ ರೈಟ್ಸ್ ಮತ್ತು ಪಹಣಿ ಪತ್ರಿಕೆಗಳ ಬಗ್ಗೆ

೯೩. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕದ ಹಳ್ಳಿ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭೂಮಿಯ ಒಡೆತನ ನಿರ್ಧರಿಸುವ ರೆಕಾರ್ಡ್ ಆಫ್ ರೈಟ್ಸ್ ಗೇಣಿ ಮತ್ತು ಪಹಣಿ ಪತ್ರಗಳನ್ನು ತಯಾರಿಸುವವರು ಯಾರು ?

ಆ) ಅವುಗಳನ್ನು ಯಾರಾದರು ಪರಿಶೀಲಿಸುತ್ತಿರುವರೆ ?

ಇ) ಹಾಗಿದ್ದಲ್ಲಿ ಅನ್ಯಾಯ ಆಗಿರುವ ಸಂದರ್ಭಗಳೇನಾದರೂ ಕಂಡು ಬಂದಿದೆಯೆ ?

ಈ) ಹಾಗಿದ್ದಲ್ಲಿ ಈ ರೀತಿ ಅನ್ಯಾಯವಾಗುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಉ) ಆ ರೀತಿ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸಂಬಂಧಪಟ್ಟವರ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು.)

ಅ) ಕರ್ನಾಟಕ ಭೂ ಕಂದಾಯ (ಅಧಿನಿಯಮ) ೧೯೬೪ರ ೧೯೬೫ನೇ ಪ್ರಕರಣದ ಹಾಗೂ ಕರ್ನಾಟಕ ಭೂ ಕಂದಾಯ ನಿಯಮ ೧೯೬೬ರ ೪೦ ನಿಯಮದ ಪ್ರಕಾರ ಗ್ರಾಮಲೆಕ್ಕಿಗರು, ಭೂಮಿಯ ಒಡೆತನ ನಿರ್ಧರಿಸುವ, ರೆಕಾರ್ಡ್ ಆಫ್ ರೈಟ್ಸ್, ಗೇಣಿ ಮತ್ತು ವಹಿವಾಟು, ಪತ್ರಗಳನ್ನು ತಯಾರಿಸುತ್ತಾರೆ.